ಬಂಡವಾಳ ಶೇ.25ಕ್ಕಿಂತ ಜಾಸ್ತಿ ಇರುವುದಿಲ್ಲ. ಅಂದರೆ ಸುಮಾರು 75 ಕೋಟಿ ರೂಪಾಯಿಗಳು.

2x250 ಮೆ.ವ್ಯಾ. ಸಾಮರ್ಥ್ಯದ ಜೆಪಿಟಿಪಿಎಲ್ ಯೋಜನೆಗೆ ನೀರಿನ ಸರಬರಾಜು ಕರ್ನಾಟಕ ನೀರಾವರಿ ಇಲಾಖೆಯಿಂದ ಅನುಮೋದನೆಯಾಗಿದೆ. ಕೆಪಿಸಿಎಲ್ ಯೋಜನೆಗೆ ನೀರಿನ ಮೂಲ ಹಿರೇಹಳ್ಳದ ಪುನರ್ ಉತ್ಪಾದಿತ ನೀರು. ಇದು ಕರ್ನಾಟಕ ಪಾಲಿನ ನೀರೆ ಆಗಿರುತ್ತದೆ.

ಇ) ಸಿಇಎಯ ಒಪ್ಪಿಗೆಯನ್ನು ಉಳಿದು ಎಲ್ಲಾ ಕಾನೂನು ಬದ್ಧ ನಿಯಮಗಳನ್ನು ಪಾಲಿಸಲಾಗಿದೆ ಮತ್ತು ಒಪ್ಪಿಗೆಗಳನ್ನು ಪಡೆಯಲಾಗಿದೆ. ಸಿಇಎಯ ಒಪ್ಪಿಗೆಯನ್ನು ಸದ್ಮದಲ್ಲೇ ನಿರೀಕ್ಷಿಸಲಾಗಿದೆ. 500 ಮೆ.ವ್ಯಾ. ಯೋಜನೆಯ ಬಗ್ಗೆ ಸಿಇಎಯ ಎಲ್ಲಾ ಅಭಿಪ್ರಾಯಗಳಿಗೂ ಉತ್ತರಿಸಲಾಗಿದೆ.

ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹಾಗೂ ಸರಬರಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 951(540)

ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ)

ಪ್ರಶ್ನೆ

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯೆಷ್ಟು? ಹಾಗೂ ಎಷ್ಟು ಸರಬರಾಜು ಮಾಡಲಾಗಿದೆ? (ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಮಾಣದ ವಿದ್ಯುತ್ತನ್ನು ಹಾಗೂ ಎಷ್ಟು ದರದಲ್ಲಿ ಖರೀದಿಸಲಾಗಿದೆ. ಅದಕ್ಕೆ ಪಾವತಿಸಲಾದ ಮೊತ್ತ ಎಷ್ಟು?

ಇ) ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದಿಸಲು ಸರಕಾರದವರು ಕೈಗೊಂಡ ಕ್ರಮಗಳೇನು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷದ ವಿದ್ಯುತ್ ಲಭ್ಯತೆ (ರಾಜ್ಯದಲ್ಲಿ ಉತ್ಪಾದನೆ,

ನೆರ ರಾಜ್ಯಗಳಿಂದ ಆಮದು, ಕೇಂದ್ರ ಸ್ಥಾವರದಿಂದ ಬರುವ ರಾಜ್ಯದ ಪಾಲು, ಸ್ವಂತ ವಿದ್ಯುತ್ ಉತ್ಪಾದಕರ ಕೊಡುಗೆ ಸೇರಿದಂತೆ) ಹಾಗೂ ವಿದ್ಯುತ್ ಬೇಡಿಕೆಯ ಪ್ರಮಾಣ ಈ ಕೆಳಕಂಡಂತಿದೆ.

ವರ್ಷ	ಅನಿರ್ಧಿಷ್ಟ ವಿದ್ಯುತ್ ಬೇಡಿಕೆ (ಮಿ.ಯೂ)	ಸರಬರಾಜಾದ(ಲಭ್ಯತೆ) ವಿದ್ಯುತ್ (ಮಿ.ಯೂ)
1998-99	27000	22746
1999-2000	28500	26118
2000-2001	30000	27700

ಆ) ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್ ಪ್ರಮಾಣ, ದರ ಹಾಗೂ ಪಾವತಿಸಿದ ಮೊತ್ತ ಈ ಕೆಳಕಂಡಂತಿದೆ.

ವರ್ಷ	ಪ್ರಮಾಣ (ಮಿ.ಯೂ)	ಒಟ್ಟಾರೆ ಸರಾಸರಿ ದರ ಪೈಸೆ	ಮೊತ್ತ ರೂ.ಕೋಟಿ
1998-99	22746	100.26	2280.33
1999-2000	26118	111.16	2903.09
2000-2001	27700	136.48	3780.50

ಇ) ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದಿಸುವ ಸಲುವಾಗಿ ಆಲಮಟ್ಟಿ ಜಲವಿದ್ಯುತ್ ಯೋಜನೆ, ಬಳ್ಳಾರಿಯ ಬಳಿ 500 ಮೆಗಾ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆ, ಬೆಂಗಳೂರು ಸಮೀಪ ಬಿಡದಿಯ ಬಳಿ ಸಂಯುಕ್ತ ಆವರ್ತನ ವಿದ್ಯುತ್ ಯೋಜನೆ ಹಾಗೂ ಆರ್.ಟಿ.ಪಿ.ಎಸ್. 7ನೇ ಘಟಕದ ಕಾರ್ಯ ಪ್ರಗತಿಯಲ್ಲಿದೆ. ಅಲ್ಲದೆ, ವಿದ್ಯುತ್ ಉತ್ಪಾದನೆಗೆ ಮುಂದೆ ಬರುವ ಸ್ವತಂತ್ರ ಉತ್ಪಾದಕರಿಗೆ ಎಲ್ಲ ರೀತಿಯ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.

ಪೋಲೀಸ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಅವ್ಯವಸ್ಥೆ(ಫಾರೆನ್ಸಿಕ್ ಲ್ಯಾಬ್)